**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ- 1457/2021

Cw-1 Pw-1

| | |
|---|---|
| ಹೆಸರು | ಗಂಗವ್ವಾ ಗಂಡ ಶ್ರೀಶೈಲ ಮಾಳಿ |
| ವಯಸ್ಸು | 45 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಸಾವಳಗಿ |

ದಿನಾಂಕಃ24-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ದಿನಾಂಕ 17-10-2020 ರಂದು ಸಂಜೆ 06-45 ಗಂಟೆ ಸುಮಾರಿಗೆ ನಾಕೂರ ಆರ್ ಸಿ ಹತ್ತಿರ ನನ್ನ ಗಂಡನು ಶ್ರೀಶೈಲ ಮಾಳಿ ಇತನು ಸಂತೆ ಮಾಡಿಕೊಂಡು ಸೈಕಲ ಮೇಲೆ ಮರಳಿ ಬರುವಾಗ ಟಿಪ್ಪರ ವಾಹನದ ಚಾಲಕ ಅದನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿರುತ್ತಾರೆ . ಸದರಿ ಅಪಘಾತದ ವಿಚಾರವನ್ನು ನನಗೆ ಚಾಸಾ-6 ರವರು ಬಂದು ತಿಳಿಸಿರುತ್ತಾರೆ . ಆ ಕಾಲಕ್ಕೆ ನಾನು ಮನೆಯಲ್ಲಿ ಇದ್ದೆ . ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ಅಪಘಾತದಲ್ಲಿ ನನ್ನ ಗಂಡನಿಗೆ ಮೌಂಸ ಖಂಡಗಳು ಹೊರಗೆ ಬಂದು ಮೃತ ಪಟ್ಟಿದ್ದ ಬಗ್ಗೆ ನೋಡಿರುತ್ತೇನೆ . ನಂತರ ನನ್ನ ಗಂಡನ ಮೃತ ಶವವನ್ನು ಜಮಖಂಡಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತಾರೆ . ನಂತರ ನನ್ನ ಮಗ ಚಾಸಾ- 6 ಇತನಿಗೆ ವಿಚಾರಿಸಲಾಗಿ ಟಿಪ್ಪರ ವಾಹನ ವೇಗವಾಗಿ ಬಂದು ನನ್ನ ಗಂಡ ಚಲಾಯಿಸುತ್ತಿದ್ದ ಸೈಕಲಗೆ ಹಾಯಿಸಿ ಅಪಘಾತ ಪಡಿಸಿದ ಬಗ್ಗೆ ತಿಳಿಸಿರುತ್ತಾನೆ . ನಾನು ಸ್ಥಳಕ್ಕೆ ಹೋದಾಗ ಟಿಪ್ಪರ ವಾಹನ ಮುಂದೆ ಹೋಗಿ ನಿಂತಿತ್ತು ಅದರೆ ಚಾಲಕ ಓಡಿ ಹೋಗಿರುತ್ತಾನೆ . ನಂತರ ಟಿಪ್ಪರ ವಾಹನದ ಚಾಲಕನ ಹೆಸರು ರವಿಕಾಂತ ಎಂದು ಕೇಳಿ ತಿಳಿದುಕೊಂಡಿರುತ್ತೇನೆ . ನಂತರ ನಾನು ಸಾವಳಗಿ ಪೋಲಿಸ ಠಾಣೆಗೆ ಹೋಗಿ ಪಿರ್ಯಾದಿ ಕೊಟ್ಟಿರುತ್ತೇನೆ . ನಾನು ಹೇಳಿದಂತೆ ಚಾಸಾ- 9 ರವರು ಪಿರ್ಯಾದಿಯನ್ನು ಬರೆದಿರುತ್ತಾರೆ . ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ .

ಪಿರ್ಯಾದಿ ನೋಡುತ್ತಿದ್ದು ಅದನ್ನು ನಿಪಿ-1 ಎಂದು , ಸಾಕ್ಷಿ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು .

**ಪಾಟೀ ಸವಾಲುಃ ಶ್ರೀ ಎಸ್ ಕೆ ಎಚ್ ಆರೋಪಿ ಪರ ವಕೀಲರಿಂದಃ-**

ನಾನು ಶಾಲೆ ಕಲಿತಿರುವದಿಲ್ಲ . ನನ್ನ ಗಂಡನಿಗೆ 50 ವರ್ಷಗಳು ವಯಸ್ಸಾಗಿಯಾರಬಹುದು . ನನ್ನ ಗಂಡನಿಗೆ ಸುಮಾರು 65 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ . ಆತನಿಗೆ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ . ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಪಿರ್ಯಾದಿಯನ್ನು ನಾನು ಪೋಲಿಸ ಠಾಣೆಯಲ್ಲಿ ಕೊಟ್ಟಿರುತ್ತೇನೆ . ಪಿರ್ಯಾದಿ ಕೊಡುವ ಕಾಲಕ್ಕೆ ಚಾಸಾ- 6 , 8 , 9 ರವರು ನನ್ನ ಜೊತೆ ಹಾಜರು ಇದ್ದರು . ನನ್ನ ಮಗನಿಗೆ ಪಿರ್ಯಾದಿಯನ್ನು ಬರೆಯಲು ಪೋಲಿಸರ ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸರಿ . ತದನಂತರ ನನ್ನ ಹೆಬ್ಬಟ್ಟು ಗುರುತನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ .ಅಪಘಾತವಾದಾಗ ನಾನು ಮನೆಯಲ್ಲಿ ಇದ್ದೆ ಎಂದರೆ ಸರಿ. ಅಪಘಾತವೂ ನನ್ನ ಗಂಡನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ . ಸಾವಳಗಿಯಿಂದ ಬರುವಾಗ ನಮ್ಮ ಮನೆ ಬಲಗಡೆ ಬರುತ್ತದೆ ಎಂದರೆ ಸರಿ . ನನ್ನ ಗಂಡ ಸಂತೆ ಮುಗಿಸಿಕೊಂಡು ತನ್ನ ಸೈಕಲ ಮೇಲೆ ರಸ್ತೆಯ ಎಡಕಿನಿಂದ ಬಲಕ್ಕೆ ಒಮ್ಮೆಲೆ ಬಂದಿರುತ್ತಾನೆ ಎಂದರೆ ಸರಿ . ನನ್ನ ಗಂಡನಿಗೆ ಸುಮಾರು ಸಲ ಟಿಪ್ಪರ ವಾಹನದ ಚಾಲಕ ಹಾರ್ನ ಹೊಡೆದರುೂ ಸಹ ಆತನಿಗೆ ಕೇಳಿಸಿರುವದಿಲ್ಲ ಎಂದರೆ ಸರಿಯಲ್ಲ . ಟಿಪ್ಪರ ವಾಹನದ ಹಿಂದಿನ ಗಾಲಿಯು ನನ್ನ ಗಂಡನ ಮೈ ಮೇಲೆ ಹೋಗಿರುತ್ತದೆ ಎಂದರೆ ಸರಿಯಲ್ಲ .

ನಮ್ಮ ಮನೆಗೆ ಬರುವ ದಾರಿಯ ಹತ್ತಿರ ಎರಡು ಬದಿಗೆ ಇಟ್ಟಿಗೆ ಬಟಿಗಳು ಇವೆ ಎಂದರೆ ಸರಿ . ಅಲ್ಲಿ ಸಾಕಷ್ಟು ಜನ ದಟ್ಟನೆ ಇರುತ್ತದೆ ಎಂದರೆ ಸರಿ . ಅಲ್ಲಿ ರಸ್ತೆ ತಿರುವ ಇದ್ದ ರಿಂದ ರಸ್ತೆಯ ಮೇಲೆ ಹುಬ್ಬುಗಳು ಇದ್ದ ಕಾರಣ ಸಾಮಾನ್ಯವಾಗಿ ಕಡಿಮೆ ವೇಗದಲ್ಲಿ ಬರುತ್ತವೆ ಎಂದರೆ ಸರಿಯಲ್ಲ . ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಗಂಡ ಮೃತ ಆದ ಕಾರಣ ಪರಿಹಾರ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ . ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಹೆಚ್ಚಿನ ಪರಿಹಾರ ಬರಲಿ ಎಂದು ಪೋಲಿಸರ ಮಾತು ಕೇಳಿ ಖೋಟ್ಟಿ ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಟಿಪ್ಪರ ವಾಹನದ ಚಾಲಕ ಸಾಕಷ್ಟು ಮುಂಜಾಗ್ರತೆಯನ್ನು ತೆಗೆದುಕೊಂಡರು ಸಹ ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ